## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹಳಿಯಾಳ.

**ಸಿ.ಸಿ.ನಂ. 355/2019**

ಫಿರ್ಯಾದಿದಾರ : ಕರ್ನಾಟಕ ಸರ್ಕಾರದ ಪರವಾಗಿ
ವಲಯ ಅರಣ್ಯ ಅಧಿಕಾರಿ,
ಸಾಂಬ್ರಾಣಿ ವಲಯ, ಸಾಂಬ್ರಾಣಿ

ವಿರುದ್ಧ

ಆರೋಪಿತರು : 1. ಭೀಮಣ್ಣಾ ಬಾಬು ಮೇತ್ರಿ,
ವಯಸ್ಸು: 37 ವರ್ಷ, ವೃತ್ತಿ: ಬಡಗಿ,

2. ಶ್ರೀ ವಿಠ್ಠಲ ಶಿವಾಜಿ ಗಡಿಯಾಳಕರ,
ವಯಸ್ಸು: 37 ವರ್ಷ, ವೃತ್ತಿ: ಬಡಗಿ,
ಇಬ್ಬರೂ ಸಾ: ದೊಡ್ಡಕೊಪ್ಪ, ಹಳಿಯಾಳ.

### ಆಪಾದನೆ

ದಿನಾಂಕ: 19-06-2018 ರಂದು ಸಂಬ್ರಾಣಿ ಅರಣ್ಯ ವಲಯ ವ್ಯಾಪ್ತಿಗೆ ಬರುವ ದೊಡ್ಡಕೊಪ್ಪ ಗ್ರಾಮದ ಕಾಯ್ದಿಟ್ಟ ಅರಣ್ಯ ಪ್ರದೇಶದ ಅರಣ್ಯ ಸರ್ವೆ ನಂಬರ 72 ನೇದ್ದರಲ್ಲಿ ಆರೋಪಿತರಾದ ನೀವು ಅನಧೀಕೃತವಾಗಿ ಯಾವುದೇ ಪಾಸ್ ಅಥವಾ ಪರ್ಮಿಟ್ ಇಲ್ಲದೇ ಹಸಿ ನಿಂತ 08 ಸಾಗವಾನಿ ಮರಗಳನ್ನು ಕಡಿದು 275 ನಗಗಳನ್ನಾಗಿ ರೂಪಾಂತರಿಸಿರುವ ಮೂಲಕ ನೀವು ಕರ್ನಾಟಕ ಅರಣ್ಯ ಕಾಯ್ದೆ 1963 ರ ಕಲಂ 24(ಇ) ಕ.ಅ. ಅಧಿನಿಯಮ ರನ್ವಯ ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದಾಗಿ ಆಪಾದಿಸಲಾಗಿದೆ.

ಕೊನೆಯದಾಗಿ ಆರೋಪಿತರಾದ ನೀವು ಈ ಮೇಲೆ ಹೇಳಿದ ಅದೇ ದಿನಾಂಕ, ಸಂದರ್ಭ ಹಾಗೂ ಸ್ಥಳದಲ್ಲಿ ಸರ್ಕಾರದ ಯಾವುದೇ ಪರವಾನಿಗೆ ಇಲ್ಲದೇ ಮೇಲೆ ಹೇಳಿದ ಅರಣ್ಯ ಉತ್ಪನ್ನವನ್ನು ಅನಧಿಕೃತವಾಗಿ ನಿಮ್ಮ ಮನೆಯ ಆವರಣಕ್ಕೆ ಸಾಗಾಟ ಮಾಡಿ ನಿಮ್ಮ ಕಬ್ಜಯಲ್ಲಿಟ್ಟುಕೊಳ್ಳುವ ಮೂಲಕ ನೀವು ಕರ್ನಾಟಕ ಅರಣ್ಯ ಕಾಯ್ದೆ 1963 ರ ಕಲಂ 50(2)(ಬಿ) ಹಾಗೂ ಹಾಗೂ ಕರ್ನಾಟಕ ಅರಣ್ಯ ನಿಯಮಗಳು 1969 ರ ನಿಯಮ 144 ಸಹವಾಚಕ ನಿಯಮ 165 ರಡಿ ಅಪರಾಧಮ್ಮ ಮಾಡಿರುತ್ತೀರಿ.

ಆರೋಪಿ ಕ್ರಮಾಂಕ 1.

ಪ್ರಶ್ನೆ ೧ : ಈಗ ಓದಿ ಹೇಳಿದ ಆಪಾದನೆಯ ಸಾರಾಂಶ ನಿಮಗೆ ತಿಳಿಯಿತೇ ?
ಉತ್ತರ :

ಪ್ರಶ್ನೆ ೨ : ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ ?
ಉತ್ತರ :

ಆರೋಪಿ ಕ್ರಮಾಂಕ 2.

ಪ್ರಶ್ನೆ ೧ : ಈಗ ಓದಿ ಹೇಳಿದ ಆಪಾದನೆಯ ಸಾರಾಂಶ ನಿಮಗೆ ತಿಳಿಯಿತೇ ?
ಉತ್ತರ :

ಪ್ರಶ್ನೆ ೨ : ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ ?
ಉತ್ತರ :

(ಆರೋಪಿತರಿಗೆ ಆಪಾದನೆಯ ಸಾರಾಂಶವನ್ನು ಅವರಿಗೆ ತಿಳಿದ ಭಾಷಯಲ್ಲಿ ಓದಿ ಹೇಳಿ, ಕೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು.)

ಸ್ಥಳ : ಹಳಿಯಾಳ.
ದಿನಾಂಕ : 02 -03 -2022.

ಪ್ರ.ದ.ನ್ಯಾ.ದಂ., ಹಳಿಯಾಳ.